ಅಧ್ಯಾಯ 1 ನಮ್ಮಸುತ್ತಮುತ್ತಲಿನ ದ್ರವ್ಯಗಳು.

1.ಪೊಟ್ಯಾಸಿಯಂ ಪರಮಾಂಗನೇಟನ್ನು ಅನೇಕಬಾರಿ ಸಾರರಿಕ್ತಗೊಳಿಸಿದಾಗಲೂ ಅದರ ಬಣ್ಣ ಗೋಚರಿಸಲು ಕಾರಣ, ದ್ರವ್ಯದ ಕಣಗಳು

ಅ) ತುಂಬಾ ದೊಡ್ಡದಾಗಿರುವುದು ಆ) ತುಂಬಾ ಚಿಕ್ಕದಾಗಿರುವುದು

ಇ) ನೀರಿನಲ್ಲಿ ವಿಲೀನವಾಗುವುದು ಈ) ನೀರಿನಲ್ಲಿ ವಿಲೀನವಾಗದಿರುವುದು

2.ದ್ರವ್ಯದ ಕಣಗಳ ಆಕರ್ಷಣೆಯ ಇಳಿಕೆ ಕ್ರಮದ ಸರಿಯಾದ ಜೋಡಣೆ,

ಅ) ಉಪ್ಪು, ಹಾಲು, ಸಾರಜನಕ ಆ) ಸಾರಜನಕ, ಹಾಲು, ಉಪ್ಪು

ಇ) ಹಾಲು, ಸಾರಜನಕ, ಉಪ್ಪು ಈ) ಹಾಲು, ಉಪ್ಪು, ಸಾರಜನಕ

3.ಅನಿಲಗಳ ಲಕ್ಷಣಕ್ಕೆ ಸಂಬಂಧಿಸಿದಂತೆ ಸರಿಯಲ್ಲದ ಹೇಳಿಕೆ,

ಅ) ಒತ್ತಡಕ್ಕೊಳಪಡಿಸಿದಾಗ ಅವುಗಳ ಸ್ಥಿತಿ ಬದಲಾಗುತ್ತದೆ.

ಆ) ತಾಪ ಹೆಚ್ಚಿದಂತೆ ಅವುಗಳ ವಿಸರಣಾದರ ಹೆಚ್ಚುತ್ತದೆ

ಇ) ಅನಿಲಗಳು ಘನ ದ್ರವಗಳಿಗಿಂತ ಹೆಚ್ಚು ಸಂಕೋಚನೆ ಹೊಂದುತ್ತವೆ

ಈ) ತಾಪ ಕಡಿಮೆಯಾದಂತೆ ಅವುಗಳ ವಿಸರಣಾದರ ಹೆಚ್ಚುತ್ತದೆ

4.ವಸ್ತುವೊಂದು ಘನಸ್ಥಿತಿಯಿಂದ ನೇರವಾಗಿ ಅನಿಲಸ್ಥಿತಿಗೆ ಅಥವಾ ಅನಿಲಸ್ಥಿತಿಯಿಂದ ನೇರವಾಗಿ ಘನಸ್ಥಿತಿಗೆ ಬದಲಾಗುವ ಪ್ರಕ್ರಿಯೆ.

ಅ) ದ್ರವನ ಆ)ಅನಿಲನ ಇ) ಉತ್ಪತನ ಈ) ಘನೀಕರಣ

5. ಶುಷ್ಕ ಮಂಜುಗಡ್ಡೆ ಎಂದರೆ

ಅ) ಅನಿಲ ರೂಪದ CO_2 ಆ) ಘನ CO_2 ಇ)ಘನ H_2O ಈ)ದ್ರವ H_2O

6.ವಾತಾವರಣದ ಒತ್ತಡದಲ್ಲಿ ತಾಪ ಮತ್ತು ನೀರಿನ ಸ್ಥಿತಿಗೆ ಸಂಬಂಧಿಸಿದ ಸರಿಯಾದ ಜೋಡಿ

ಅ) 328 K – ಅನಿಲ ಆ)35^0C – ಅನಿಲ ಇ) -16^0C – ದ್ರವ ಈ) 273 K – ಘನ

7. 25^0 C ಯನ್ನು ಕೆಲ್ವಿನ್‌ಗೆ ಪರಿವರ್ತಿಸಿದಾಗ

ಅ) 308 K ಆ) 398 K ಇ)248 K ಈ)298 K

8.ತಂಪಾದ ಜ್ಯೂಸ್ ತುಂಬಿರುವ ಲೋಟದ ಹೊರ ಮೇಲ್ಮೈ ಮೇಲೆ ನೀರಿನಹನಿಗಳನ್ನು ಪ್ರಶಾಚಿತ್ ಗುರುತಿಸುತ್ತಾನೆ, ಇದಕ್ಕೆ ಕಾರಣವಾದ ಪ್ರಕ್ರಿಯೆ

ಅ)ಘನೀಕರಣ ಆ) ಸಾಂದ್ರೀಕರಣ ಇ)ಆವೀಕರಣ ಈ) ದ್ರವನ

9. ಶಾಂತಲಾ 50mL ನೀರಿಗೆ 10ಗ್ರಾಂ ಉಪ್ಪನ್ನು ಸೇರಿಸಿದಾಗ ದ್ರಾವಣದ ಮಟ್ಟದಲ್ಲಿ ಏರಿಕೆಯಾಗಿಲ್ಲದಿರುವುದನ್ನು ಗಮನಿಸುತ್ತಾಳೆ, ಇದಕ್ಕೆ ಕಾರಣ

ಅ) ಉಪ್ಪು ನೀರಿನಲ್ಲಿ ಕರಗದೇ ಇರುವುದು

ಆ) ಉಪ್ಪಿನ ಕಣಗಳು ನೀರಿನ ಕಣಗಳ ನಡುವಿನ ಅವಕಾಶದಲ್ಲಿ ಸೇರಿಕೊಳ್ಳುವುದು

ಇ) ಉಪ್ಪಿನ ಸಾಂದ್ರತೆ ನೀರಿಗಿಂತ ಹೆಚ್ಚಿರುವುದು

ಈ) ಉಪ್ಪು ಬೆರೆತಾಗ ನೀರು ವೇಗವಾಗಿ ಆವಿಯಾಗುವುದು

10.ನೀರಿನ ಆವೀಕರಣ ಗುಪ್ತೋಷ್ಣ ಎಂದರೆ,

ಅ) 1 kg ಮಂಜುಗಡ್ಡೆಯನ್ನು ಅದರ ದ್ರವನ ಬಿಂದುವಿನಲ್ಲಿ ವಾತಾವರಣದ ಒತ್ತಡದಲ್ಲಿ ದ್ರವವಾಗಿ ಪರಿವರ್ತಿಸಲು ಬೇಕಾದ ಉಷ್ಣದ ಪ್ರಮಾಣ

ಆ) 1 kg ನೀರಾವಿಯನ್ನು ಅದರ ದ್ರವನ ಬಿಂದುವಿನಲ್ಲಿ ವಾತಾವರಣದ ಒತ್ತಡದಲ್ಲಿ ದ್ರವವಾಗಿ ಪರಿವರ್ತಿಸಲು ಬೇಕಾದ ಉಷ್ಣದ ಪ್ರಮಾಣ

ಇ) 1 kg ನೀರನ್ನು ಅದರ ಘನೀಕರಣ ಬಿಂದುವಿನಲ್ಲಿ ವಾತಾವರಣದ ಒತ್ತಡದಲ್ಲಿ ಘನವಾಗಿ ಪರಿವರ್ತಿಸಲು ಬೇಕಾದ ಉಷ್ಣದ ಪ್ರಮಾಣ

ಈ) 1 kg ನೀರನ್ನು ಅದರ ಕುದಿಯುವ ಬಿಂದುವಿನಲ್ಲಿ ವಾತಾವರಣದ ಒತ್ತಡದಲ್ಲಿ ಆವಿಯಾಗಿ ಪರಿವರ್ತಿಸಲು ಬೇಕಾದ ಉಷ್ಣದ ಪ್ರಮಾಣ.

– ರಾಘವೇಂದ್ರ ಭಟ್. ಸ.ಪ್ರೌ.ಶಾಲೆ. ಕಡ್ಡೂರು.

rbrsbhat@gmail.com

9483810224